ಕೊಳಚೆ ಪ್ರದೇಶಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ಎಂದು ನಾನು ಕೇಳಿದಾಗ ಸುಳ್ಯ ತಾಲ್ಲೂಕಿನಲ್ಲಿ ಯಾವುದೇ ಕೊಳಚೆ ಪ್ರದೇಶ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಸುಳ್ಯ ನಗರ ಪ್ರದೇಶದಲ್ಲಿ ಗಾಂಧೀನಗರ ಎನ್ನುವಂತಹ ಜಾಗದಲ್ಲಿ ಹರಿಜನರು ವಾಸ ಮಾಡುವಂತಹ ಜಾಗ. ಅಲ್ಲಿ ಪೇಟೆಯಿಂದ ಬರುವಂತಹ ಎಲ್ಲಾ ಕೊಳಚೆ ನೀರು ಆ ಪ್ರದೇಶದ ಮಧ್ಯೆ ಭಾಗದಲ್ಲಿ ಹರಿದು ಹೋಗುತ್ತದೆ. ಅಲ್ಲಿ ಒಂದು ಶೌಚಾಲಯ ಕೂಡ ಇಲ್ಲ.

ಅಧ್ಯಕ್ಷರು :- ಸುಳ್ಯದಲ್ಲಿ ಕೊಳಚೇ ಪ್ರದೇಶ ಇದೆ. ಅಲ್ಲಿ ಕೆಲಸ ತೆಗೆದುಕೊಳ್ಳಬೇಕು ಎನ್ನುವುದು ತಮ್ಮ ಅಭಿಪ್ರಾಯ.

ಶ್ರೀ ಹೆಚ್. ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನಲ್ಲಿ ಮೊದಲು ಯಾವುದೇ ಕೊಳಚೆ ಪ್ರದೇಶ ಇರುವುದಿಲ್ಲ. ಆ ರೀತಿ ಯಾವುದಾದರೂ ಕೊಳಚೆ ಪ್ರದೇಶ ಇದ್ದರೆ ಸಂಬಂಧಪಟ್ಟಂತಹ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ತಕ್ಷಣ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಸ್. ಅಂಗಾರ:- ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನಲ್ಲಿ 3-4 ಕಡೆ ಕೊಳಚೆ ಪ್ರದೇಶ ಇದೆ. ಆ ಕೊಳಚೇ ಪ್ರದೇಶವನ್ನು ನಿವಾರಣೆ ಮಾಡಬೇಕು. ಮಾನ್ಯ ಸಚಿವರು ಈ ಹಿಂದೆ 6.70 ಲಕ್ಷ ರೂ. ಕೊಡುತ್ತೇನೆಂದು ಈ ಸಭೆಯಲ್ಲಿ ಉತ್ತರ ಕೊಟ್ಟಿದ್ದರು. ಇದುವರೆಗೂ ಅದು ಕಾರ್ಯಗತವಾಗಿಲ್ಲ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ

ಮಂಗಳೂರು ನಗರಕ್ಕೆ ಹೈಟೆಕ್ ಬಸ್ಸುಗಳನ್ನು ಒದಗಿಸುವುದು

63 (288) ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ಸಾರಿಗೆ ಸಂಸ್ಥೆಯ ಮಲಯದಲ್ಲಿ 4 ಲಕ್ಷ ಕಿ.ಮೀ. ಗಿಂತ ಹೆಚ್ಚು ಓಡಾಡಿದ ಬಸ್‌ಗಳ ಸಂಖ್ಯೆ ಎಷ್ಟು? ಅವುಗಳನ್ನು ಬದಲಾಯಿಸಿ ಹೊಸ ಹೈ-ಟೆಕ್ ಬಸ್‌ಗಳನ್ನು ಯಾವಾಗ ಖರೀದಿಸಲಾಗುವುದು?

ಆ) ಸದರಿ ವಲಯದಲ್ಲಿ ತಾಂತ್ರಿಕ ಹಾಗೂ ಇತರ ಸಿಬ್ಬಂದಿಗಳ ಕೊರತೆ ಇದೆಯೇ? ಹಾಗೂ ಅದನ್ನು ಯಾವಾಗ ತುಂಬಲಾಗುವುದು?

ಇ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮಂಗಳೂರು ವಲಯದಲ್ಲಿ ಕೈಗೊಂಡಿರುವ ಹೊಸ ಅಭಿವೃದ್ಧಿ ಕಾರ್ಯಗಳಾವುವು? ಹಾಗೂ ಅವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಒಟ್ಟು 480 ವಾಹನಗಳಿದ್ದು, ಅವುಗಳಲ್ಲಿ 272 ವಾಹನಗಳು 4ಲಕ್ಷ ಕಿ.ಮೀ ಗಿಂತಲೂ ಹೆಚ್ಚು ಓಡಿರುವ ವಾಹನಗಳಾಗಿರುತ್ತವೆ. ಅವುಗಳಲ್ಲಿ 214 ಗ್ರಾಮಾಂತರ ಮಾದರಿಯ ವಾಹನಗಳು 47 ಅರೆಸುವಿಹಾರಿ ವಾಹನಗಳು 9 ಸುವಿಹಾರಿಗಳ ಮತ್ತು 2 ಅಲ್ಟ್ರಾ ಸುವಿಹಾರಿ ವಾಹನಗಳಾಗಿರುತ್ತವೆ 2 ಅಲ್ಟ್ರಾ ಸುವಿಹಾರಿ ವಾಹನಗಳನ್ನು ಮೇಲ್ಕಂಡ ವಿಭಾಗಕ್ಕೆ ಮಾರ್ಚ್ 1998ರ ಅಂತ್ಯದ ವೇಳೆಗೆ ಕೊಡಲಾಗುವುದು.

ಮಂಗಳೂರು ವಿಭಾಗದ ಸಿಬ್ಬಂದಿ ಕೊರತೆ ವಿವರಗಳನ್ನು ಅನುಬಂಧ - ಅ ದರಲ್ಲಿ ನೀಡಲಾಗಿದೆ ಹಾಗೂ ಇಲಾಖಾವಾರು ವಿವರ ಈ ಕೆಳಕಂಡಂತಿದೆ.

1) ಆಡಳಿತ ಸಿಬ್ಬಂದಿ : 20
2) ಸಂಚಾರ ಸಿಬ್ಬಂದಿ : 127
3) ತಾಂತ್ರಿಕ ಸಿಬ್ಬಂದಿ : 180

ಕ.ರಾ.ರ.ಸಾ.ಸಂಸ್ಥೆಯ ಪದವ್ಯಂದ ಮತ್ತು ನೇಮಕಾತಿ ನಿಯಮಾವಳಿಗಳು 1982ರಪ್ರಕಾರ ಖಾಲಿ ಹುದ್ದೆಗಳನ್ನು ಬಡ್ತಿಯ ಮೂಲಕ ಮತ್ತು ನೇರ ನೇಮಕಾತಿ ಮೂಲಕ ತುಂಬಲು ಅವಕಾಶ ಮತ್ತು ನೇರ ನೇಮಕಾತಿ ಮೂಲಕ ತುಂಬಲು ಅವಕಾಶ ಕಲ್ಪಿಸಿದ್ದು, ಅದರಂತೆ ಈಗಾಗಲೇ ಹಿಂಬಾಕಿ ಹುದ್ದೆಗಳಾದ 67 ಚಾಲಕರು (45 ಹಿಂಬಾಕಿ ಹುದ್ದೆಗಳು ಹಾಗೂ 22 ಇತರೆ ಹುದ್ದೆಗಳು) ಮತ್ತು 37 ನಿರ್ವಾಹಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ತುಂಬಲು ಜಾಹೀರಾತುಗಳನ್ನು ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಗಳು ಪ್ರಗತಿಯಲ್ಲಿದೆ. ಪುತ್ತೂರಿನಲ್ಲಿ ಹೊಸ ಡಿಪೋ ನಿರ್ಮಾಣವನ್ನು 8 ಎಕರೆ ಜಮೀನಿನಲ್ಲಿ ಕೈಗೆತ್ತಿಕೊಳ್ಳಲಾಗುತ್ತಿದೆ. ಈ ಜಾಗವು ಪುತ್ತೂರು ಕೆಮ್ಮಾಂಜಿ ರಸ್ತೆಯಲ್ಲಿರುತ್ತದೆ. ಹಾಲಿ ಡಿಪೋವನ್ನು ಹೊಸದಾಗಿ ನಿರ್ಮಿಸುವ ಡಿಪೋವನ್ನು ಹೊಸದಾಗಿ ನಿರ್ಮಿಸುವ ಡಿಪೋಗೆ ಸ್ಥಳಾಂತರಿಸಲಾಗುವುದು. ಕುಕ್ಕೇಸುಬ್ರಮಣ್ಯ ಮತ್ತು ಕುಂದಾಪುರಗಳಲ್ಲಿ ಬಸ್ ನಿಲ್ದಾಣಗಳನ್ನು ನಿರ್ಮಿಸಲು ಈಗಾಗಲೇ ಭೂಮಿಯನ್ನು ಖರೀದಿಸಲಾಗಿದೆ.

ಅನುಬಂಧ - ಅ

ಆಡಳಿತ ಸಿಬ್ಬಂದಿ :

1.	ಸಿಬ್ಬಂದಿ ಅಧೀಕ್ಷಕರು.	1
2.	ಲೆಕ್ಕಪತ್ರ ಅಧೀಕ್ಷಕರು	1
3.	ಅಂಕಿ ಅಂಶ ಅಧೀಕ್ಷಕರು	1
4.	ಸಿಬ್ಬಂದಿ ಮೇಲ್ವಿಚಾರಕರು	3
5.	ಲೆಕ್ಕಪತ್ರ ಮೇಲ್ವಿಚಾರಕರು	1
6.	ಉಗ್ರಾಣ ರಕ್ಷಕ	1
7.	ಸಹಾಯಕ ಲೆಕ್ಕಿಗ	2
8.	ಅಂಕಿಅಂಶ ಸಹಾಯಕ	3
9.	ಸಹಾಯಕ ಉಗ್ರಾಣರಕ್ಷಕ	2
10.	ಕಛೇರಿ ಸಹಾಯಕ	4
11.	ಕಿರಿಯ ಸಹಯಕ	1
		20

ಸಂಚಾರ ಸಿಬ್ಬಂದಿ :

1.	ಸಹಾಯಕ ಸಂಚಾರ ಅಧೀಕ್ಷಕ	3
2.	ಸಂಚಾರ ನಿರೀಕ್ಷಕ	2
3.	ಸಹಾಯಕ ಸಂಚಾರ ನಿರೀಕ್ಷಕ	5

4.	ಸಂಚಾರ ನಿಯಂತ್ರಕ	4
5.	ಚಾಲಕ	67
6.	ನಿರ್ವಾಹಕ	46
		127

ತಾಂತ್ರಿಕ ಸಿಬ್ಬಂದಿ :

1.	ಸಹಾಯಕ ಕಾರ್ಯ ಅಧೀಕ್ಷಕ	7
2.	ಪಾರುಪತ್ತೇಗಾರ	6
3.	ಕುಶಲಕರ್ಮಿ	45
4.	ಸಹಾಯಕ ಕುಶಲಕರ್ಮಿ	38
5.	ಮುಖ್ಯ ಕುಶಲಕರ್ಮಿಗಳು	1
6.	ಸಹಾಯಕ-ಎ	5
7.	ಸಹಯಕ-ಬಿ	78
		180

ಶ್ರೀ ಎನ್. ಯೋಗೇಶ್ ಭಟ್: ಮಾನ್ಯ ಅಧ್ಯಕ್ಷರೆ, 4 ಲಕ್ಷ ಕಿಲೋಮೀಟರ್ ಗಿಂತ ಜಾಸ್ತಿ ಓಡಿರತಕ್ಕಂಥ ಬಸ್‌ಗಳನ್ನು ಹಿಂದಕ್ಕೆ ಪಡೆದು ಆ ಜಾಗದಲ್ಲಿ ಹೊಸ ಬಸ್‌ಗಳನ್ನು ಹಾಕಬೇಕೆಂದು ಕೇಳುತ್ತೇನೆ. ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿರುವ ಹಾಗೆ 4 ಲಕ್ಷ ಕಿಲೋಮೀಟರ್ ಗಿಂತ ಜಾಸ್ತಿ ಓಡಿರುವ ಬಸ್‌ಗಳ ಸಂಖ್ಯೆ 272 ಎಂದುಹೇಳಿದ್ದಾರೆ. ಈ ಬಸ್‌ಗಳನ್ನು ಹಿಂದಕ್ಕೆ ಪಡೆದು ಹೊಸ ಬಸ್‌ಗಳನ್ನು ಹಾಕಲಾಗುತ್ತದೆಯೇ? ಆಮೇಲೆ ಮಂಗಳೂರು ಭಾಗದಲ್ಲಿ ಖಾಸಗಿಯವರು ಹೈಟೆಕ್ ಬಸ್‌ಗಳನ್ನು ಹಾಕಿ ಪ್ರಯಾಣಿಕರುಗಳಿಗೆ ಒಳ್ಳೆಯ ಸೌಕರ್ಯಗಳನ್ನು ಒದಗಿಸುತ್ತಿದ್ದಾರೆ. ಅದೇ ರೀತಿ ಹೈಟೆಕ್ ಬಸ್‌ಗಳನ್ನು ಮಂಗಳೂರು ಭಾಗಕ್ಕೆ ಸರ್ಕಾರದವರು ಹಾಕಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ (ಸಾರಿಗೆ ಮಂತ್ರಿಯವರ ಪರವಾಗಿ):- ಮಾನ್ಯ ಅಧ್ಯಕ್ಷರೆ, 4 ಲಕ್ಷ ಕಿಲೋಮೀಟರ್ ಗಿಂತ ಜಾಸ್ತಿ ಓಡಿಸಿರುವಂಥ ಬಸ್‌ಗಳನ್ನು ಬದಲಾವಣೆ ಮಾಡುವುದರ ಜೊತೆಗೆ ಹೈಟೆಕ್ ಬಸ್‌ಗಳನ್ನು ಹಾಕಬೇಕೆಂದು ಕೇಳಿದ್ದಾರೆ. ಎಲ್ಲಾ ಭಾಗಗಳಿಗೂ ಹೈಟೆಕ್ ಬಸ್‌ಗಳನ್ನು ಹಾಕುವುದಕ್ಕಾಗುವುದಿಲ್ಲ. ಮಂಗಳೂರು ಭಾಗದಲ್ಲಿ ಈಗಾಗಲೇ ಎರಡು ಹೈಟೆಕ್ ಬಸ್‌ಗಳನ್ನು ಹಾಕಲಾಗಿದೆ. ಮುಂದಿನ ತಿಂಗಳು ಇನ್ನೂ ಎರಡು ಹೈಟೆಕ್ ಬಸ್‌ಗಳನ್ನು ಆ ಭಾಗದಲ್ಲಿ ಹಾಕತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಆ ಮೇಲೆ, ಕೆ.ಎಸ್.ಆರ್.ಟಿ.ಸಿ., ಯಲ್ಲಿರತಕ್ಕಂಥ ಸಂಪನ್ಮೂಲಗಳನ್ನು ನೋಡಿಕೊಂಡು ಹಂತ ಹಂತವಾಗಿ ಉತ್ತಮ ಬಸ್‌ಗಳನ್ನು ಹಾಕುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎನ್. ಯೋಗೇಶ್ ಭಟ್:- ನಮ್ಮ ಮಂಗಳೂರು ವಿಭಾಗದಲ್ಲಿ ತಾಂತ್ರಿಕ ಸಿಬ್ಬಂದಿಯವರು ಕೇವಲ 180 ಜನ ಇದ್ದಾರೆ, ಸಂಚಾರಿ ನಿಯಂತ್ರಕರು 127 ಜನ ಇದ್ದಾರೆ, ಆಡಳಿತ ಸಿಬ್ಬಂದಿಯವರು ಕೇವಲ 20 ಜನರಿದ್ದಾರೆ. ತಾಂತ್ರಿಕ ಸಿಬ್ಬಂದಿಯವರ ಕೊರತೆಯಿಂದ ಮಾರ್ಗ ಮಧ್ಯದಲ್ಲಿ ಕೆಟ್ಟು ಹೊಗತಕ್ಕಂಥ ಬಸ್‌ಗಳನ್ನು ರಿಪೇರಿ ಮಾಡಿ ಸಂಚಾರಕ್ಕೆ ಕಳುಹಿಸುವುದಕ್ಕೆ ಬಹಳ ನಿಧಾನವಾಗುತ್ತಿದೆ. ಆದುದರಿಂದ, ಖಾಲಿ ಇರುವ ಸಿಬ್ಬಂದಿ ವರ್ಗದವರನ್ನು ಆದಷ್ಟು ಬೇಗ ತುಂಬಿಕೊಡುವ ಬಗ್ಗೆ ಸರ್ಕಾರ

ಕ್ರಮ ಕೈಗೊಳ್ಳುತ್ತದೆಯೆ? ಆಮೇಲೆ ಕೆ.ಎಸ್.ಆರ್.ಟಿ.ಸಿ., ಸಿಬ್ಬಂದಿ ವರ್ಗದವರಿಗೆ ವಸತಿ ಗೃಹಗಳನ್ನು ಕಟ್ಟಿಸಿಕೊಡುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಂ.ಸಿ. ನಾಣಯ್ಯ :- ಮಾನ್ಯ ಸಭಾದ್ಯಕ್ಷರೆ, ಸಿಬ್ಬಂದಿ ಕೊರತೆ ಎಷ್ಟಿದೆ ಎಂಬ ಬಗ್ಗೆ ಪಟ್ಟಿಯನ್ನು ಕೊಟ್ಟಿದ್ದೇವೆ. ಈಗಾಗಲೇ ನೇಮಕಾತಿ ಪ್ರಕ್ರಿಯೆ ಶುರುವಾಗಿದೆ. ಚಾಲಕರುಗಳನ್ನು, ಕಂಡಕ್ಟರುಗಳನ್ನು ಮತ್ತು ತಾಂತ್ರಿಕ ಸಿಬ್ಬಂದಿಯವರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಜಾಹೀರಾತನ್ನು ಕರೆಯಲಾಗಿದೆ. ಇನ್ನು ಮೂರು ತಿಂಗಳೊಳಗೆ ಈ ಕೊರತೆಯನ್ನು ತುಂಬಿ ಸಿಬ್ಬಂದಿ ಕೊರತೆ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಣೆ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುತ್ತದೆ.

ಅಧ್ಯಕ್ಷರು :- ಮಾನ್ಯ ಬೀಳಗಿಯವರು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಆಗಿದ್ದಾಗ 3 ಸಾವಿರ ಹೊಸ ಬಸ್‌ಗಳನ್ನು ಹಾಕುತ್ತೇವೆಂದು ಹೇಳಿದ್ದರು. ಅದಲ್ಲದೆ ಇವೆಲ್ಲಾ ಹಾಕಿದ್ದೀರಾ?

ಶ್ರೀ ಎಂ.ಸಿ. ನಾಣಯ್ಯ :- ಅವರ ಕಾಲದಲ್ಲಿ ಸುಮಾರು 1500 ಬಸ್‌ಗಳನ್ನು ಹಾಕಿದ್ದರು. ಹಣದ ಕೊರತೆ ಇದ್ದುದರಿಂದ ಪೂರ್ಣ ಪ್ರಮಾಣದಲ್ಲಿ ಬಸ್‌ಗಳನ್ನು ಹಾಕಲಿಕ್ಕೆ ಆಗಲಿಲ್ಲ ಎನ್ನುವುದು ನಿಜ. ಕೆಲವು ಸಂದರ್ಭಗಳಲ್ಲಿ ಸದನದಲ್ಲಿ ಮಾಡುತ್ತೇವೆಂದು ಹೇಳಿದ್ದರೂ ಕೂಡ ಸಂಪನ್ಮೂಲಗಳ ಕೊರತೆ ಉಂಟಾದಾಗ ಹೇಳಿದ ರೀತಿಯಲ್ಲಿ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ.

ಅಧ್ಯಕ್ಷರು:- ಬಸ್‌ಗಳನ್ನು ಹಾಕುವುದಕ್ಕೆ ಆಗದೇ ಇರುವಂಥ ಕಡೆ ರೈಲನ್ನು ಬಿಡುವುದಕ್ಕಾಗುತ್ತದೆಯೇ?

ಶ್ರೀ ಎಂ.ಸಿ. ನಾಣಯ್ಯ :- ರೈಲನ್ನು ಕೆಲವು ಸಂದರ್ಭದಲ್ಲಿ ಬಿಡುತ್ತಿದ್ದೇವೆ.

ಶ್ರೀ ಎನ್. ಯೋಗೇಶ್ ಭಟ್:- ಪುತ್ತೂರಿನಲ್ಲಿ ಹೊಸ ಬಸ್ ಸ್ಟ್ಯಾಂಡ್‌ನ್ನು ಮಾಡುವ ಬಗ್ಗೆ ಕಾರ್ಯಕ್ರಮ ಕೈಗೆತ್ತಿಕೊಳ್ಳಲಾಗಿದೆಯೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಅದೇ ರೀತಿ ಕುಕ್ಕೆ ಸುಬ್ರಮಣ್ಯ ಮತ್ತು ಕುಂದಾಪುರದಲ್ಲಿ ಹೊಸದಾಗಿ ಬಸ್ ಸ್ಟ್ಯಾಂಡ್‌ಗಳನ್ನು ನಿರ್ಮಾಣ ಮಾಡುವುದಕ್ಕೆ ಸಂಬಂಧಪಟ್ಟಂತೆ ಈಗಾಗಲೇ ಭೂಮಿಯನ್ನು ಖರೀದಿಸಲಾಗಿದೆಯೆಂದು ಸಹಾ ಉತ್ತರ ಕೊಡಲಾಗಿದೆ. ಅಲ್ಲಿ ಯಾವಾಗ ಬಸ್ ಸ್ಟ್ಯಾಂಡ್ ಕಟ್ಟುವ ಕೆಲಸವನ್ನು ಪ್ರಾರಂಭ ಮಾಡಲಾಗುವುದು?

ಶ್ರೀ ಎಂ.ಸಿ. ನಾಣಯ್ಯ :- ಕುಕ್ಕೆ ಸುಬ್ರಮಣ್ಯ ಮತ್ತು ಕುಂದಾಪುರದಲ್ಲಿ 1998-99 ರಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ. ಆ ಕೆಲಸವನ್ನು ಆದಷ್ಟು ಬೇಗ ಮುಗಿಸಲಿಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಕ.ರಾ.ರ.ಸಾ.ಸಂಸ್ಥೆ ಸಿಬ್ಬಂದಿ ನೇಮಕಾತಿ

64 (120) ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ಎಷ್ಟು ವಿಭಾಗಗಳಾಗಿ ವಿಭಜಿಸಲಾಗಿದೆ. ಎಂದಿನಿಂದ ವಿಭಜಿಸಲಾಗಿದೆ (ಅವು ಯಾವುದು)?

ಆ) ಪ್ರತಿಯೊಂದು ಸಂಸ್ಥೆಯಲ್ಲಿ ಕೊರತೆ ಇರುವ ಸಿಬ್ಬಂದಿಯ ವಿವರ ನೀಡುವುದು